International Journal for Multidisciplinary Research (IJFMR)
E-ISSN: 2582-2160 ● Website: www.ijfmr.com ● Email: editor@ijfmr.com

# ಶ್ರೀ ನಿರುಪಾಧೀಶರ ಅರಿವಿನ ಆಂದೋಲನದ 'ಅನುಭಾವದರಳು'

**ಡಾ.ಶುಭಾ ಮರವಂತೆ**

ಸಹ ಪ್ರಾಧ್ಯಾಪಕರು, ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ

'ಅಡವೇಶ', 'ಅಡವಿಸಿದ್ಧ', 'ನಿರುಪಾಧೀಶ' ಇತ್ಯಾದಿ ವಚನಾಂಕಿತದ ಮೂಲಕ ಆಧುನಿಕ ವಚನ ಸಾಹಿತ್ಯಕ್ಕೆ ಹೊಸ ರೂಪ ಹೊಸ ವಿನ್ಯಾಸ ಕೊಟ್ಟವರು ಶ್ರೀ ನಿರಂಜನ ನಿರಾಭಾರಿ ಪೂಜ್ಯ ನಿರುಪಾಧೀಶರು. ಅವರ 'ಅನುಭಾವದರಳು' ಹಲವು ಕಾರಣಗಳಿಗಾಗಿ ಮಹತ್ವದ ಕೃತಿ ಎನಿಸಿದೆ. ಅವರ ವಚನಗಳ ಭಾವ, ಭಾಷೆ, ತತ್ವ, ದರ್ಶನ, ಧರ್ಮ, ಕರ್ಮ ಸಂಸ್ಕೃತಿ ಚಿಂತನೆ, ಕಾವ್ಯ ಸಿದ್ಧಾಂತ, ಅನುಭಾವ, ಲೋಕಾನುಭವ, ಆಚಾರ-ವಿಚಾರಗಳ ಪರಾಮರ್ಶೆ ಮೊದಲಾದ ಹಲವು ವೈಚಾರಿಕತೆಗಳು ಒಟ್ಟಂದದಲ್ಲಿ ಎರಕ ಹೊಯ್ದಂತೆ ಪ್ರಸ್ತುತ ಸಂಕಲನ ಮೂಡಿಬಂದಿದೆ.
ವಚನ, ತ್ರಿಪದಿ ಮತ್ತು ಚೌಪದಿ ಈ ಮೂರು ಪ್ರಕಾರಗಳನ್ನು ಬಳಸಿಕೊಂಡು 'ಅನುಭಾವದರಳು' ಕೃತಿ ರಚಿತವಾಗಿದೆ. ಸಂಪಾದಕರು ಈ ಕೃತಿಯ ಆರಂಭದಲ್ಲಿಯೇ ಗುರುತಿಸಿರುವಂತೆ ಸರ್ವಜ್ಞನ ವಚನಗಳನ್ನು ಕಗ್ಗದ ಭಾವ ಭಾಷೆಗಳನ್ನು ವಚನ ರಚನೆಯ ಸೊಗಡನ್ನು ಸಂಸ್ಕೃತಿಯ ವಿವೇಕವನ್ನು ಒಟ್ಟಾಗಿ ಬೆರೆತುಕೊಂಡಿದೆ. ಸಾಮಾನ್ಯ ಜೀವನದ ಹಲವು ಅನುಭವಗಳಿಗೆ ಕಾವ್ಯದ ಭಾಷೆ ಕೊಟ್ಟು ನಿರೂಪಿಸುವ ಕೌಶಲ ಇಲ್ಲಿ ವಿಶೇಷವೆನಿಸಿದೆ. ಸರ್ವಜ್ಞನ ವಚನಗಳಿಂದ ಪ್ರಭಾವಿತರಾದ ಪೂಜ್ಯರು ಅದೇ ಪ್ರಕಾರವನ್ನು ತಮ್ಮ ಕಾವ್ಯ ನಿರ್ಮಿತಿಗೆ ಬಳಸಿಕೊಂಡಿದ್ದಾರೆ.

ತ್ರಿಪದಿ ತೋರಣ, ಚೌಪದಿ ಚಂಪಕ ಎರಡು ವಿಭಾಗಗಳಲ್ಲಿ ಹರಡಿಕೊಂಡ ಈ ಉದ್ಗ್ರಂಥದಲ್ಲಿ ೧೧೨೪ ತ್ರಿಪದಿಗಳೂ, ೧೫೨೦ ಚೌಪದಿಗಳಿವೆ. ತ್ರಿಪದಿ ತೋರಣದಲ್ಲಿ ಶ್ರುತಿಶ್ರೀ, ಶಬ್ದಶ್ರೀ, ಸುಜ್ಞಾನಶ್ರೀ, ಸ್ವರಶ್ರೀ, ಸಂಕೇತಶ್ರೀ ಎಂಬ ಒಟ್ಟು ೫ ವಿಭಾಗಗಳಿವೆ. ಚೌಪದಿ ಚಂಪಕದಲ್ಲಿ ಸ್ತುತಿಶ್ರೀ, ಚಿಂತನಶ್ರೀ, ವಿಚಾರಶ್ರೀ, ಧರ್ಮಶ್ರೀ, ಸಂಕೀರ್ಣಶ್ರೀ, ಸಂಸ್ಕೃತಿಶ್ರೀ, ಶಿಕ್ಷಣಶ್ರೀ, ಸಾಹಿತ್ಯಶ್ರೀ, ಆರೋಗ್ಯಶ್ರೀ, ಸಮಯಶ್ರೀ ಎಂಬ ಹತ್ತು ವಿಭಾಗಗಳಿವೆ. ಪ್ರತಿಯೊಂದು ಹೆಸರಿನ ವಿಭಾಗಕ್ಕೂ ಸೇರಲ್ಪಡುವ ತ್ರಿಪದಿ ಹಾಗೂ ಚೌಪದಿಗಳಲ್ಲಿ ವೈವಿಧ್ಯಮಯ ವಿಚಾರ ಸಂಪನ್ನತೆಯನ್ನು ಶ್ರೀಗಳು ಮೆರೆದಿದ್ದಾರೆ. ಪ್ರತೀ ರಚನೆಗಳು ಕಾವ್ಯ ಕಲಾಕೃತಿಯಾಗಿ ರೂಪುಗೊಳ್ಳುವ ಹಂತದಲ್ಲಿ ಅವರ ದೂರದೃಷ್ಟಿ, ಅನುಭವದ ವಿಸ್ತಾರ, ಪದಜಾಣ್ಮೆ, ಕ್ರಿಯಾಶೀಲತೆ, ನುಡಿ ಸ್ಪಷ್ಟತೆ ಇವೆಲ್ಲವನ್ನೂ ಒಟ್ಟಾಗಿ ದುಡಿಸಿಕೊಳ್ಳುವ ಪ್ರಮಾಣಿಕ ಪ್ರಯತ್ನವೊಂದನ್ನು ಇಲ್ಲಿ ಕಾಣುತ್ತೇವೆ. ಅಭಿಪ್ರಾಯವನ್ನು ವ್ಯಕ್ತಪಡಿಸುವ ಧಾವಂತದಲ್ಲಿ ಒಂದೊಂದು ಕಡೆ ಪ್ರಾಸಕ್ಕಾಗಿಯೊ, ಗೇಯತೆಗಾಗಿಯೊ ಅಲ್ಲಲ್ಲಿ ಪದಗಳು, ಭಾವಗಳು ತುಂಡು ತುಂಡಾದಂತೆ ಕಂಡರೂ, ಅರ್ಥ ಸುಭಗತೆಗೆ ಇನ್ನೂ ಏನೋ ಬೇಕು ಅನ್ನಿಸಿದರೂ ಭಾವಸಂವಹನಕ್ಕೆ ಯಾವುದೆ ಕೊರತೆಯಿಲ್ಲ ಅನಿಸುತ್ತದೆ. ಇಲ್ಲಿರುವ ಎಲ್ಲಾ ರಚನೆಗಳು ಮೌಲಿಕವೆಂದೆನೂ ನನ್ನ ಅಭಿಪ್ರಾಯವಲ್ಲ. ಆದರೆ ಒಂದೊಂದು ವಿಭಾಗದಲ್ಲಿಯೂ ಸತ್ಯದ ಅನ್ವೇಷಣೆ ಮತ್ತು ಹುಡುಕಾಟದ ನೆಲೆಗಳು ಮತ್ತೆ ಮತ್ತೆ ನಮ್ಮೊಳಗೊಂದು ವಿವೇಕವನ್ನು ಮರುಸ್ಥಾಪಿಸುತ್ತವೆ.

**ತ್ರಿಪದಿ ತೋರಣ:**

ತ್ರಿಪದಿ ಕನ್ನಡದ ಅತ್ಯಂತ ಪ್ರಾಚೀನ ಕಾವ್ಯ ಪ್ರಕಾರ. ಸ್ವಚ್ಚಂದ ಭಾವಸೇಚನಕ್ಕೆ ಇದು ಅತ್ಯಮೂಲ್ಯ ಕಾವ್ಯ ಬಂಧ. ತ್ರಿಪದಿ ಕಾವ್ಯ ಪ್ರಕಾರವನ್ನು ಆಯ್ಕೆ ಮಾಡಿಕೊಳ್ಳುವ ಶ್ರೀಗಳ ಉದ್ದೇಶ, ಅವರೆ ಹೇಳುವಂತೆ ಸರ್ವಜ್ಞನ ಹಾಗೆ ಅವರ ಮನೋ ಪ್ರವೃತ್ತಿ ಅದು 'ಸ್ವತಂತ್ರಗತಿ' ಮತ್ತು 'ಸ್ವತಂತ್ರಮತಿ'. ಅರಿವಿಗೆ ಅಡೆ ತಡೆ ಇಲ್ಲದ ನಿರ್ಭಿತ ಭಾವಾಭಿವ್ಯಕ್ತಿ.

ಸರ್ವಜ್ಞನ ಗುರುಕಾರುಣ್ಯವನ್ನು ಮತ್ತೆ ಮತ್ತೆ ಸ್ಮರಿಸಿಕೊಳ್ಳುವ ಶ್ರೀಗಳು ಅರಿವಿನ ಆಂದೋಲನಕ್ಕೆ ತನ್ನನ್ನೆ ತಾನು ತೆತ್ತವರು. ಅವರ ದೃಷ್ಟಿಯಲ್ಲಿ ಯಾರು ತನ್ನ ಮತಿಗೆ ಅನ್ನಿಸಿರುವುದನ್ನು ತಕ್ಷಣವೇ ಗ್ರಹಿಸಿ ಲಿಪಿ ತೀಕ್ಷ್ಣತೆಯಿಂದ ಸೂಕ್ಷ್ಮ ಸುವಿಚಾರಿಯಾಗಿ ತನ್ನ ದಕ್ಷತೆಯನ್ನು ಕಾಪಾಡಿಕೊಳ್ಳುತ್ತಾನೆಯೋ ಅವನು ಕವಿ ಎನಿಸಿಕೊಳ್ಳುತ್ತಾನೆ. ಕವಿಗಿರುವುದು ಭಾವದ ಕಣ್ಣು. ಈ ಭಾವದ ಕಣ್ಣಿನಿಂದ ಸ್ಥೂಲ ಸೂಕ್ಷ್ಮತೆಯ ಅರಿವು ಸಹಜವಾಗಿ ಗೋಚರಿಸಬೇಕು. ಈ ಅನುಭವ ಸೂಕ್ಷ್ಮತೆಯನ್ನು ಅನುಭವಿಸಿ ಕವಿ ಬರೆಯುವ ಪದರಾಶಿಗೆ ಯಾರನ್ನೂ ಮೆಚ್ಚಿಸುವ ಅಗತ್ಯವಿಲ್ಲ ಎನ್ನುತ್ತಾರೆ. ಕಾವ್ಯಮತಿಯೇ 'ಸ್ವತಂತ್ರ್ಯ ಮತಿ' ಎಂದು ಸಾರುವ ನಿರುಪಾಧೀಶರು, ಕಾವ್ಯ ವಿಮರ್ಶೆಯಲ್ಲಿ ಬಳಸುವ ರಸ ವಿಮರ್ಶೆಯ ಕೆಲವು ಹೊಳಹುಗಳನ್ನು ನೀಡುತ್ತಾರೆ. ಕವಿಯನ್ನು ಯೋಗಿ ಎಂದು ಕರೆಯುವ ಅವರು ಕವಿಯ ಸಾಕ್ಷೀ ಪ್ರಜ್ಞೆಯನ್ನು ಮೆಚ್ಚುತ್ತಾರೆ. ಈ ವಚನ ಈ ಮೇಲಿನ ಮಾತಿಗೆ ಸಾಕ್ಷಿ ಎನ್ನಬಹುದು

ಸತ್ಯವೆನ್ನುವ ಕೆಲವರು ಮಿಥ್ಯವೆನ್ನುವ ಕೆಲವರು।
ನಿತ್ಯ ನಾನಾರ್ಥವಿರಲೆನ್ನ ನಮನ ಸಾ।
ಕ್ಷಿತ್ವವಿಹುದದಕೆ ಅಡವೇಶ।

ಕಾವ್ಯಮೀಮಾಂಸೆಯ ಪರಿಭಾಷೆಯಲ್ಲಿ ಶ್ರೀಗಳಿಗೆ ವಿಶೇಷ ಆಸಕ್ತಿ ಇದ್ದಂತೆ ತೋರುತ್ತದೆ. ಕವಿ ಎಂದರೆ ಯಾರು? ಕಾವ್ಯ ಎನ್ನುವುದು ಏನು? ರಸ–ದೃಷ್ಟಿ–ಸೃಷ್ಟಿ ಹೇಗೆ? ಕವಿ ಪ್ರತಿಭೆಯ ಕಾರ್ಯವೇನು? ಸಾಹಿತ್ಯ ಸುಖದ ಅರ್ಥವೇನು? ಮುಂತಾದ ಹಲವು ಪ್ರಶ್ನೆಗಳಿಗೆ ಶ್ರೀಗಳ ಉತ್ತರ ವಿಭಿನ್ನವಾಗಿದೆ. ಕವಿ ಕಣ್ಣು ಕಾಣುವ ಲೋಕದೃಷ್ಟಿ, ಸಂಭವಿಸುವ ಸಾಕ್ಷಾತ್ಕಾರ, ಗಹನ ಶಬ್ದ ಕಲ್ಪನೆ ಇವೆಲ್ಲವೂ ಕವಿಯಾದವನಿಗೆ ಅತ್ಯಗತ್ಯ. ಕವಿ ಹೃದಯದ ಭಾವ ಸಮಾಧಿಯಿಂದ ಕಾವ್ಯಝರಿ ಸಹಜತೆಯ ಲಾಸ್ಯದಿಂದ ಹೊರಬರುವುದೇ ಕಾವ್ಯ ಎನ್ನುವುದು ಶ್ರೀಗಳ ಪರಿಕಲ್ಪನೆ. ಅದಕ್ಕೆ ಒಂದಿಷ್ಟು ಭಾವಗಳ ನಿಗೂಢತೆ ಬೇಕು. ಕಾವ್ಯದ ಆತ್ಮಗತಿಯು ಅನೇಕ ಭಾವಗಳ ಜಾಡು ಹಿಡಿದು ಸಾಗುವಂತದ್ದು. ಕವಿಪ್ರವೃತ್ತಿಯು ಒಳಿತಿನೆಡೆಗೆ ಸಾಗುವ ನಿರಂತರ ಪ್ರಕ್ರಿಯೆ ಎಂದು ಶ್ರೀಗಳು ಭಾವಿಸುತ್ತಾರೆ. ಶೃಂಗಾರಾದಿ ರಸ ಮಾಧ್ಯಮಗಳ ಮೂಲಕ ಭಾವದ ಉತ್ಕರ್ಷವು ವಿರೇಚನಗೊಂಡು ಮನಸ್ಸು ಮತ್ತು ಹೃದಯ ಶುದ್ಧಿವಾಗುವ ಪರಿಕಲ್ಪನೆಯನ್ನು ಅರಿಸ್ಟಾಟಲ್ ಹೇಳುವ ಹಾಗೆ ಶ್ರೀಗಳು ಕೂಡ ಹೃದಯ ಮತ್ತು ಭಾವಶುದ್ಧಿಗೆ ಕಾವ್ಯವು ಆಕರವೆಂದು ಭಾವಿಸುತ್ತಾರೆ.

ಶೃಂಗಾರವಿಡಿದು ಬಹುರಂಗ ಕಾವ್ಯಾತ್ಮಗತಿ।
ಹೆಂಗಾರವಿರಲಿ ಸದ್ಗತಿಯಡೆಯೊಯ್ವು।
ತುಂಗ ಸತ್ಕವಿಯು ಅಡವೇಶ।

ಕವಿತೆ 'ಜಯ ಪತ್ರ' ಎಂದು ಕರೆಯುವ ಅವರು ಕವಿತೆಯನ್ನು ಕವಿಯ ಶಕ್ತಿಯಾಗಿಸುತ್ತಾರೆ. ದೇವತೆಗಳಲ್ಲಿ ಅನೇಕ ದಿವ್ಯಾಸ್ತ್ರಗಳಿವೆ. ಅವರಿಗೆ ದಿವ್ಯಾಸ್ತ್ರವೇ ಮುಖ್ಯವೆನಿಸಿದರೇ, ದಿವ್ಯಮತಿಯಾದ ಕವಿಗೆ ಕವಿತೆಯೇ ಅಸ್ತ್ರವಾಗುತ್ತದೆ. ಅಲ್ಲದೆ ಕವಿಗೆ ಮತಿಯೇ ದಿವ್ಯಾಸ್ತ್ರವೆನ್ನುವುದು ಇಲ್ಲಿಯ ಇನ್ನೊಂದು ಭಾವ. ಕವಿಮತಿ ಅಥವಾ ಕವಿಪ್ರಜ್ಞೆ ಎನ್ನುವ ಶಸ್ತ್ರವನ್ನು ಯಾರು ಕಸಿದುಕೊಳ್ಳುತ್ತಾರೆ ಎಂದವರು ಕೇಳುತ್ತಾರೆ.

ದಿವ್ಯ ದೇವತೆಗಳಿಗೆ ದಿವ್ಯಾಸ್ತ್ರ ಬಹಳುಂಟು।
ದಿವ್ಯ ಮತಿ ಶಸ್ತ್ರ ಕಸಿದುಕೊಳ್ಳುವರಾರು।

ಕವಿತೆ ಜಯಪತ್ರ ಅಡವೇಶ।

ಯಮಧರ್ಮ ಯಮನ ಆಯುಷ್ಯವನ್ನು ಬರೆದರೆ, ಕವಿಯಾದವನು ತನ್ನ ಕಾವ್ಯ ಪ್ರತಿಭೆಯ ಆಯುಷ್ಯವನ್ನು ಬರೆಯುತ್ತಾನೆ. ಶಬ್ದಗಳನ್ನು ಕದಿಯುವ, ಕಾವ್ಯಗಳನ್ನು ಕದಿಯುವ ಶಾಬ್ದಿಕ ಚೋರನು ಕವಿಯಾಗಲು ಸಾಧ್ಯವೇ? ಅದು ಅವಮಾನ ಸಂಗತಿಯಲ್ಲವೇ? "ಅವಮಾನ ನಂತರವೇ ಭುವನ ದೊರಕಿದರೇನು ಸವಿಯಾಗಬಹುದೆ? ಚೋರ ಶಾಬ್ದಿಕನು ಕವಿಯಾಗಬಹುದೆ?"ಎಂದು ಕೇಳುತ್ತಾ ಕವಿ ಕರ್ಮದ ನಿಗೂಢತೆಯನ್ನು ಹಲವು ಸೂಕ್ಷ್ಮತೆಗಳ ಕುರಿತು ನಿರೂಪಿಸುವ ಅವರು ಭಾರತೀಯ ಕಾವ್ಯ ಮೀಮಾಂಸಕರಂತೆ ಕವಿತೆಯನ್ನು ವನಿತೆಗೆ ಹೋಲಿಸುತ್ತಾರೆ.

ಬಣ್ಣ ಪ್ರಕೃತಿಗೆ ಹಚ್ಚಿ ಹೆಣ್ಣು ಚೇತನವಿರಿಸಿ।
ಹಣ್ಣುದುರಿದಂತೆ ನಾಟ್ಯನಾಡಿಸುವ ಕಲೆ।
ಇನ್ನಾರಿಗುಂಟು ಅಡವೇಶ। ॥ ೬೨ ॥

ಕಾವ್ಯವೆನ್ನುವುದೇ ಶ್ರೀಗಳ ದೃಷ್ಟಿಯಲ್ಲಿ ಅದು ಸ್ತ್ರೀ ಚೇತನ– ಅದು ಪ್ರಕೃತಿಯ ಮೂಲ ನೆಲೆಯೂ ಹೌದು. ತನ್ನ ಕಲ್ಪನೆಯ ಕಾವ್ಯಕನ್ನಿಕೆಗೆ ವಿವಿಧ ಬಣ್ಣಗಳನ್ನು ರೂಪಿಸಿ, ಹೆಣ್ತನದ ಚೇತನವನ್ನು ಇರಿಸಿ, ಕಾವ್ಯವನ್ನು ಕುಣಿಸುವ ಕಲೆ ಕವಿಗಲ್ಲದೇ ಇನ್ನಾರಿಗುಂಟು ಎಂಬ ಭಾವ ಇಲ್ಲಿ ಮುಖ್ಯವಾಗುತ್ತದೆ. ಕವಿ ಕರ್ಮದಲ್ಲಿ ಕಾವ್ಯ ನಿರ್ಮಿತಿ ಹೇಗೆ ಸಾಧ್ಯವೆಂದರೆ ಮರದಿಂದ "ಹಣ್ಣು ಉದುರಿದಂತೆ". ಕವಿಯಾದವನು ಕಾವ್ಯವನ್ನು ತನ್ನ ಸತಿಯಂತೆ ಪ್ರೀತಿಸಬೇಕೆನ್ನುವ ಕಲ್ಪನೆ ಇಲ್ಲಿ ವಿಶೇಷ. ಸ್ತ್ರೀತ್ವ ಎನ್ನುವುದೆ ನವಿರು ಕಲ್ಪನೆ. ಅದು ಹೆಚ್ಚು ಸೃಜನಶೀಲೆನ್ನುವ ಭಾವ.

ಸಾಹಿತಿಯು ಸಾಹಸಿಯೂ ಆಗಿರಬೇಕು ಎನ್ನುವ ಅವರ ಅಭಿಪ್ರಾಯದಲ್ಲಿ ಸಾಹಿತ್ಯ ಜ್ಞಾನ ಇರುವವರಿಗೆ ಮತ್ತು ವಿದ್ವಾಂಸರಿಗೆ ಅಹಂಕಾರವು ಎಂದೂ ಸಲ್ಲದು ಎಂದು ಹೇಳುತ್ತಾರೆ. ಒಂದೋ ಎರಡು ಕವಿತೆಯನ್ನೊ ಕಾವ್ಯ ಸಂಕಲನ ಬರೆದ ಮಾತ್ರಕ್ಕೆ ಈ ಕಾಲದ ಅತ್ಯುತ್ಕೃಷ್ಟ ಕವಿ ತಾನೆ ಎಂದು ಬೀಗುವವರಿಗೆ ಇಲ್ಲಿ ಚಾಟಿಯ ಏಟಿನಂತಹ ಮೊನಚು ಮಾತುಗಳಿವೆ. ಕವಿಯಾಗಬೇಕಾದರೆ ಕಾವ್ಯ ಶಾಸ್ತ್ರಜ್ಞಾನ ಬೇಕು. ಕಾವ್ಯಶಾಸ್ತ್ರ ಅರಿಯದೇ ಕಾವ್ಯವನ್ನು ಬರೆದರೆ ಸವಿ ಹಾಲಿಗೆ ಹುಣಸೆ ಹಣ್ಣನ್ನು ಬೆರೆಸಿದಂತೆ ಕೆಟ್ಟು ಹೋದಂತೆ ಆಗುತ್ತದೆ.

ಕಾವ್ಯ ಶಾಸ್ತ್ರವನರಿತು ಕಾವ್ಯವನು ಬರೆಯದಿರೆ।
ಸವಿಹಾಲು ಹುಣಚಿ ಸರಿ ಬೆರೆಸಿತುಂಬಂತೆ।
ಕಾವ್ಯ–ಕವಿರೂಪು ಅಡವೇಶ। ॥ ೬೯ ॥

ಹಾಗಾಗಿ ಕಾವ್ಯಕ್ಕೆ ಛಂಧಸ್ಸಿನ ಬಂಧ ಇರಬೇಕು. ಛಂಧಸ್ಸು ಇರದ ಕೃತಿ 'ಸುಂದರಿಯ ಮೂಗು ಕೊಯ್ದಂತೆ' ಎನ್ನುವ ಹೋಲಿಕೆ, ಕಾವ್ಯದಲ್ಲಿ ಛಂಧಸ್ಸಿನ ಮಹತ್ವವನ್ನು ಸಾರುತ್ತದೆ. ಈ ಹಿನ್ನೆಲೆಯಲ್ಲಿ ಗಮನಿಸಿದರೆ, ಶ್ರೀಗಳಿಗೆ ಕಾವ್ಯಸತ್ವದ ಬಗ್ಗೆ, ಕಾವ್ಯನಿಷ್ಠತೆಯ ಬಗ್ಗೆ ತಮ್ಮದೇ ವಿಭಿನ್ನ ಕಲ್ಪನೆಗಳಿರುವುದು ಸ್ಪಷ್ಟವಾಗುತ್ತದೆ. ಈ ತ್ರಿಪದಿಗಳಲ್ಲಿ ಕವಿಗೆ ಹೇಳಬೇಕಾದ ಹಲವು ಕಿವಿ ಮಾತುಗಳಿವೆ.

ಶಿವಶರಣರಂತೆ ನಡೆ–ನುಡಿ ಸಿದ್ಧಾಂತಕ್ಕೆ ಇಲ್ಲಿಯ ವಚನಗಳು ಬದ್ಧವಾಗಿವೆ. ಮಾತು ನಮ್ಮ ಶಕ್ತಿ. ಬಸವಣ್ಣನವರ 'ನುಡಿದರೆ ಮುತ್ತಿನ ಹಾರದಂತಿರಬೇಕು' ಎಂಬ ವಚನ, ನಮ್ಮ ನಾಲಿಗೆಗೂ ಹಾಗೂ ನಮ್ಮ ವರ್ತನೆಗೂ ಪರಸ್ಪರ ಸಂಬಂಧವಿರಬೇಕು ಎನ್ನುವುದು ಸಾಧಿಸುತ್ತಾರೆ. ಶ್ರೀ ನಿರುಪಾಧೀಶ್ವರು 'ಸತ್ಯ ಹರಿಶ್ಚಂದ್ರ ' ಮತ್ತು 'ಶಿಶುಪಾಲನ' ಕಥೆಗಳನ್ನು ನೆನಪಿಸಿಕೊಳ್ಳುತ್ತಾರೆ.

ಸ್ವಪ್ನನುಡಿ ಜಾಗ್ರದಲಿ ತಪ್ಪದಲೆ ನಡೆಸಿದನು।
ಒಪ್ಪು ಹರಿಶ್ಚಂದ್ರ ಜಾಗ್ರದಲಿ ನುಡಿದು ಜನ।

ತಪ್ಪಿಸುತಲಿಂದು ಅಡವೇಶ। ॥ ೩೧೧ ॥

ಮಾತಿಗೆ ಸಂಬಂಧಿಸಿ ನೀಡಿದ ಎರಡು ಉಪಮೆಗಳನ್ನು ಗಮನಿಸಬೇಕು. ಹರಿಶ್ಚಂದ್ರ ಮತ್ತು ಶಿಶುಪಾಲ. ಸ್ವಪ್ನದಲ್ಲಿಯೂ, ಜಾಗೃತ ಸ್ಥಿತಿಯಲ್ಲೂ ತನ್ನ ನುಡಿಗಾಗಿ ನಡೆದವನು ಶ್ರೀ ಸತ್ಯಹರಿಶ್ಚಂದ್ರ. ಮಾತು ಎಂದರೆ ಏನು ಅನ್ನುವುದು ಹರಿಶ್ಚಂದ್ರನ ವ್ಯಕ್ತಿತ್ವದ ಮೂಲಕ ತಿಳಿಯಬೇಕು. ಆದರೆ ಇಂದಿನ ಜನ ಜಾಗೃತ ಅವಸ್ಥೆಯಲ್ಲಿಯೇ ಭರವಸೆಗಳನ್ನು ನೀಡಿ ಜನರನ್ನು ದಾರಿ ತಪ್ಪಿಸುತ್ತಿದ್ದಾರೆ. ರಾಜಕಾರಣಿಗಳು, ಬಂಡವಾಳಶಾಹಿಗಳು ತಮ್ಮ ಇಚ್ಛೆ ಮತ್ತು ಸ್ವಾರ್ಥಕ್ಕೆ ಮಾತಿಗೊಂದು ಸುಳ್ಳು ಹೇಳುತ್ತಾ ವಚನ ಭ್ರಷ್ಟರಾಗುವುದನ್ನು ಈ ವಚನದಲ್ಲಿ ವಿಡಂಬಿಸುತ್ತಾರೆ. ನಮ್ಮ ಮಾತಿಗೊಂದು ನಿಯತ್ತು ಮತ್ತು ಬದ್ಧತೆ ಬೇಕು. ಮಾತಿಗೆ ಕಡಿವಾಣ ಇಲ್ಲದಿದ್ದರೆ ಶಿಶುಪಾಲನಿಗಾದ ಗತಿಯೆ ಆಗುವುದು ಎನ್ನುವುದನ್ನು ಇನ್ನೊಂದು ವಚನದಲ್ಲಿ ಹೀಗೆ ಹೇಳುತ್ತಾರೆ.

ಕಡಿವಾಣವಿರದ ನುಡಿ ಕೆಡಕಾಗುವುದು।
ಕಡೆಗೆ ಶಿಶುಪಾಲ ಶಾಮಂಗೆ ನುಡಿದುದೇ।
ಕಡೆಗಾಯ್ತು ಶಿರವು ಅಡವೇಶ। ॥ ೩೧೪ ॥

ಶಿಶುಪಾಲ ತನ್ನ ನಾಲಿಗೆಯ ಕಾರಣಕ್ಕಾಗಿಯೇ ಕೃಷ್ಣನಿಂದ ಕೊಲ್ಲಲ್ಪಟ್ಟ. ಒಳ್ಳೆಯ ಮಾತುಗಳು ಯಾವಾಗಲೂ ನಮ್ಮ ವ್ಯಕ್ತಿತ್ವದ ಘನತೆಯನ್ನು ಎತ್ತಿ ಹಿಡಿಯುತ್ತದೆ. ನಡೆ–ನುಡಿ ಎರಡೂ ಒಂದಾಗಿರುವ ವ್ಯಕ್ತಿತ್ವವೇ ಸುಂದರ. ಕಾವಿ ಉಟ್ಟು ಮಾತಿನ ಬೇಡಿ ಹಾಕಿ ಮೋಸ ಮಾಡುವ ಡಾಂಭಿಕರನ್ನು ಶ್ರೀಗಳು ವಿಡಂಬಿಸುತ್ತಾರೆ. ಕಾವಿ ಉಟ್ಟವನು ದೇವರಾಗಲು ಸಾಧ್ಯವಿಲ್ಲ. ಒಳಗಿನ ಅವಗುಣಗಳನ್ನು ತ್ಯೇಜಿಸದೆ ಹೊರಗೆ ವೇಷ ವೇಷ ಧರಿಸಿದರೆ ಏನು ಪ್ರಯೋಜನ? ಇಂತಹ ವೇಷ ಡಾಂಭಿಕರು, ರಾಗಲಂಪಟರು ಸಮಾಜಘಾತುಕ ಶಕ್ತಿಗಳಾಗಿದ್ದಾರೆ ಎನ್ನುವುದು ಶ್ರೀಗಳಿಗೆ ನೋವು ತಂದಿದೆ.

ಕಾವಿ ಧರಿಸಿರೆ ಮಾನ್ಯ ದೇವನಾಗುವನೇನಲು।
ತೀವಿಮಹಿಷಂಗೆ ತೊಡಿಸಲ್ಕೆ ನಂದಿಯ ।
ಭಾವಗುಣವುಂಟೆ ಅಡವೇಶ। ॥ ೩೧೮ ॥

ಕಾವಿ ಧರಿಸಿದವರು ದೇವರಾಗಲು ಸಾಧ್ಯವೆ ಎನ್ನುವ ಮೂಲ ವೈಚಾರಿಕ ಪ್ರಶ್ನೆಗೆ ಶ್ರೀಗಳ ವಿಡಂಬನೆ ವಿಭಿನ್ನವಾಗಿದೆ. ಕೋಣನಿಗೆ ದೈವ ಸದೃಷವಾದ ನಂದಿಯ ವೇಷವನ್ನು ತೊಡಿಸಿದರೆ, ಅದಕ್ಕೆ ದೇವಗುಣ ಬರಲು ಸಾಧ್ಯವೇ? ಎನ್ನುವ ಈ ತೀಷ್ಣ ವಿಡಂಬನೆ ವೇಷಗಾರರನ್ನು ಎಚ್ಚರಿಸುವಂತಿದೆ.
ಹಾಗೆಯೇ ವಿಷಯ ವಾಸನೆಗಳು ಮನುಷ್ಯನನ್ನು ದುರ್ಮಾರ್ಗಕ್ಕೆ ಎಳೆಯಲು ಕಾರಣವಾಗುತ್ತದೆ. ವಿಷಯ ಸುಖಗಳ ಮೋಹಕ್ಕೆ ಬಿದ್ದು, ವಿಷಭರಿತ ಚೂರಿಯನ್ನೇ ಚುಚ್ಚಿಕೊಂಡ ಹಾಗೆ ನಮ್ಮ ಬದುಕಾಗಬಾರದು. ಕತ್ತೆಮರಿ ಎಷ್ಟು ಸುಂದರವಾಗಿದ್ದರೂ ಅದಕ್ಕೆ ಹೇಗೆ ಮುದ್ದು ಮಾಡುವುದಿಲ್ಲವೋ ಹಾಗೆಯೇ ವಿಷಯ ಸುಖಗಳು ಕೂಡ ಅಷ್ಟೇ ಸುಂದರವಾಗಿ ಕಾಣುತ್ತವೆ. ಕಾಮ, ಕ್ರೋಧ, ಮೋಹ, ಮದ, ಮತ್ಸರಾದಿಗಳು ಮನುಷ್ಯನ ಚಾರಿತ್ರ್ಯವನ್ನು ಕೆಡಿಸುವ ಸಂಗತಿಗಳಾಗಿವೆ. ಕುಡಿತದ ಬಗ್ಗೆ ಶ್ರೀಗಳ ಒಂದು ಗಂಭೀರ ವಚನ ಹೀಗಿದೆ.

ತುಸು ಕುಡಿವೆನೆನಬೇಡ ತುಸುಸ್ಪರ್ಶ ವಿದ್ಯುತ್ತ।
ದಸುನೀಗಿಸದು ಏನೆವಿರೆ ಬಹು ಕಠಿಣ ।
ವಾಸನೆಯ ತ್ಯಾಗ ಅಡವೇಶ।  ॥ ೪೩೮ ॥

ಮದ್ಯಪಾನವು ಎಷ್ಟೋ ಜನರ ಬದುಕನ್ನು ಹಾಳುಗೆಡುಹುತ್ತಿರುವ ಪ್ರಸ್ತುತ ಸನ್ನಿವೇಶದಲ್ಲಿ ಕೆಟ್ಟ ವ್ಯಸನಗಳನ್ನು ಯಾಕೆ ತ್ಯೇಜಿಸಬೇಕು ಎನ್ನುದನ್ನು ಈ ವಚನ ವಿವರಿಸುತ್ತದೆ. ಹವ್ಯಾಸಕ್ಕಾಗಿ ತುಸು ಮಾತ್ರ ಕುಡಿಯುತ್ತೇನೆ ಎನ್ನುವವರಿಗೆ ಕೇಳುವ ಒಂದು ಪ್ರಶ್ನೆ ವಿದ್ಯುತ್ ತಂತಿಯನ್ನು ಸ್ವಲ್ಪ ಸ್ಪರ್ಶಿಸಿದರೂ ಅದು ಪ್ರಾಣಕ್ಕೆ ಸಂಚಕಾರವನ್ನು ತರುವುದಿಲ್ಲವೇ? ಹಾಗೆಯೇ ತುಸು ಕುಡಿತವೂ ಕೂಡ ಮನುಷ್ಯನ ಬದುಕನ್ನು ಆಹುತಿ ತೆಗೆದುಕೊಳ್ಳಬಲ್ಲದು. ಕುಡಿತದ ಚಟಕ್ಕೆ ಒಳಗಾಗುವ ಜನಕ್ಕೆ, ದಾನ-ಧರ್ಮ ಮಾಡು ಎಂದು ಹೇಳಿದರೆ ತನ್ನಲ್ಲಿ ಹಣವಿಲ್ಲ ಎಂದುಕೊಂಡು ದೂರ ಸರಿಯುತ್ತಾರೆ. ಆದರೆ ಅವರಿಗೆ ಕುಡಿಯಲು ಹಣದ ಬರವು ಬರುವುದಿಲ್ಲ. ಇಂದು ಚಾರಿತ್ರ್ಯಹೀನರಿಗೆ ಬೇಕಾದಷ್ಟು ಅವಕಾಶಗಳು ದೊರೆಯುತ್ತವೆ. ಸಂಪತ್ತು, ಅಧಿಕಾರ ಹೊಂದಿರುವ ಜನರಿಗೆ ಇವತ್ತು ಎಲ್ಲೆಡೆ ಮನ್ನಣೆ.

ಚಾರಿತ್ರ್ಯ ಹೀನರನು ನರರು ಮನ್ನಿಸುತಿಹರು।
ಭೂರಿ ಸಂಪತ್ತು ಕುತಂತ್ರದ ಅಧಿಕಾರ ।
ಕಾರಣವು ತಿಳಿಯೊ ಅಡವೇಶ।  ॥ ೪೫೮ ॥

ಸತ್ತವನನ್ನು ಹುಗಿಯಲು ಹತ್ತು ಮದ್ಯದ ಸೀಸೆಗಳು ಬೇಕು. ಮನುಷ್ಯನ ಬದುಕು ಕತ್ತೆಗಿಂತ ಕೀಳು ಎಂಬ ಈ ವಚನದಲ್ಲಿದೆ.

ಸತ್ತವನ ಹುಗಿಯಲ್ಕೆ ಹತ್ತು ಸುರೆ ಶಿಶೆ ಬೇಕು।
ಕತ್ತೆಯಿಂ ಕೀಳು ಜಂಗುಳಿಯ ಚಲ್ಲಾಟ ।
ನಿತ್ಯ ನಡೆದಿಹುದು ಅಡವೇಶ  ॥ ೪೫೬ ॥

ಹೊರಗೆ ಚಂದದ ಮಾತುಗಳನ್ನು ಆಡಿ, ಒಳಗೆ ಬೆಂಕಿ ಇಕ್ಕುವ ಜನರಿರುವ ಈ ಸಮಾಜದಲ್ಲಿ ಸಿರಿಯ ಮದವನ್ನು ತುಂಬಿಕೊಂಡ ಲಂಪಟರ ಪ್ರೀತಿ ಬಲು ಅಪಾಯಕಾರಿ ಎಂದು ಶ್ರೀಗಳು ನುಡಿಯುತ್ತಾರೆ.

ಕೂಗು ನುಡಿ ದೇವಂಗೆ ಬೇಗ ಮುಟ್ಟುವದೆನಲು।
ಜಗದಿ ಕತ್ತೆಗಳು ಕೂಗುತಿರೆ ಶಿವನೆಡೆಗೆ ।
ಹೋಗಿ ಮುಟ್ಟುವುದೇ ಅಡವೇಶ।  ॥ ೪೫೬ ॥

ಅವರ ಇನ್ನೊಂದು ವಚನದಲ್ಲಿ ಕುಂಭದ್ರವ್ಯದ ಬಳಕೆ ಹಂಬಲದಿ ಮೂಡಿರಲು ಕ್ಷಣಿಕ ಸುಖದ ಆಕಾಂಕ್ಷೆಗೆ ಮರುಳಾಗುವ ಮನಸ್ಸು ನಿಜವಾದ ಸುಖದ ಅರ್ಹ ಗ್ರಹಿಸಲು ಸಾಧ್ಯವಿಲ್ಲ ಎನ್ನುತ್ತಾರೆ. ಧರ್ಮ, ದೇವರು ಎನ್ನುವ ನಂಬಿಕೆಯಲ್ಲಿ ಮಾಡುವ ಬೂಟಾಟಿಕೆಯ ಭಕ್ತಿಯನ್ನು ಒಂದು ಉಪಮೇಯ ಮೂಲಕ ಹೀಗೆ ವಿವರಿಸುತ್ತಾರೆ.

ನಾವು ಕೂಗಿ ಕೂಗಿ ಮಾಡುವ ಭಕ್ತಿ ದೇವರಿಗೆ ತಲುಪುತ್ತದೆ ಎನ್ನುವುದಾದರೆ, ಕತ್ತೆಗಳು ಕೂಗುತ್ತಿರುತ್ತವೆ. ಕತ್ತೆಗಳ ಕೂಗು ಶಿವನೆಡೆಗೆ ಹೋಗಿ ಮುಟ್ಟುವುದೇ ಎಂಬ ತಾತ್ವಿಕತೆಯೊಂದು ಈ ವಚನದಲ್ಲಿ ಮೈದಳೆದಿದೆ. 'ಸ್ವಧರ್ಮ

ನಿಧನಂ ಶ್ರೇಯ' ಎನ್ನುವ ಮಾತನ್ನು ಶ್ರೀಗಳು ತನ್ನ ಧರ್ಮವನ್ನು ಬಿಟ್ಟು ಅನ್ಯಧರ್ಮದ ಕಡೆಗೆ ಹೋಗುವ ಮನುಷ್ಯ ಹೊನ್ನಿನ ಆಸೆಯನ್ನೇ ಮುಂದುಮಾಡಿಕೊಂಡರೆ ಪಶು-ಪಕ್ಷಿಗಳಿಗೆ ಅವನನ್ನು ಸಮವೆನ್ನುತ್ತಾರೆ. ಜಾತಿ-ಧರ್ಮಗಳೂ ಮನುಷ್ಯನ ಸಂತೋಷ-ನೆಮ್ಮದಿಯನ್ನು ಕೆಡಿಸುತ್ತವೆ ಎಂದಾದರೆ ಅಂತಹ ಜಾತಿ-ಧರ್ಮಗಳು ನಮಗೇಕೆ?

ಬರಿ ಜಾತಿವಿಭಾಗವೆ ಧರೆಮೆನುವ ಮೂರ್ಖರರು ।
ಪರಿಪಕ್ವ ತಿಳಿಯುತಾಚರಣೆಯೇ ಧರ್ಮ ।
ನರಿಯಬೇಕಿದನು ಅಡವೇಶ। ॥ ೫೫೭ ॥

ಪರಿಪಕ್ವ ಮನಸ್ಥಿತಿಯಲ್ಲಿ ಆಚಾರವನ್ನು ಅರಿತು ಅದನ್ನು ಅನುಸರಿಸುವುದೇ ಧರ್ಮ ಎನ್ನುವ ಸೂಕ್ಷ್ಮತೆಯನ್ನು ಈ ವಚನ ತಿಳಿಸುತ್ತದೆ. ಬರೀ ಜಾತಿ ವಿಭಾಗವೇ ಧರ್ಮವಲ್ಲ. ಒಂದೊಮ್ಮೆ ಜಾತಿಯನ್ನೇ ಧರ್ಮ ಎಂದು ತಿಳಿಯುವುದುದು ಮೂರ್ಖತನ, ಸತ್ಯಮಾರ್ಗ, ನಿತ್ಯ ತತ್ಸಂಗ, ಸತ್‌ಚರ್ಚೆ, ಸತ್ಯಾರ್ಥ ಇವೇ ಧರ್ಮವೆನ್ನುವ ಜಿಜ್ಞಾಸೆಯನ್ನು ಇಲ್ಲಿ ಕಾಣಬಹುದು. ಒಬ್ಬ ಚಮ್ಮಾರ ಚರ್ಮದ ಕೆಲಸ ಮಾಡುವುದು ಅವನ ಧರ್ಮ, ವೈದಿಕನು ಮಾಡುವ ಕರ್ಮವು ಒಂದು ಬಗೆಯ ಧರ್ಮ ಇದನ್ನು ಅರಿಯದ ದೂರ್ತರು ಜಾತಿ-ಧರ್ಮದ ಹೆಸರುಗಳನ್ನು ಹೇಳಿ ಮನುಷ್ಯನನ್ನು ವಿಭಾಗಿಸುವ ಬಗ್ಗೆ ತೀವ್ರ ಆಕ್ಷೇಪವನ್ನು ನಾವು ನೋಡುತ್ತೇವೆ. ಒಳ್ಳೆಯ ಹೃದಯ, ಮನಸ್ಸು ಮತ್ತು ಅಂತರಂಗದಲ್ಲಿ ಯಾರಿಗೇ ಪ್ರತಿಕಾರ ರಹಿತವಾದ ವಾತ್ಸಲ್ಯ ಇರುತ್ತದೆಯೋ ಅದೇ ಧರ್ಮವೆನ್ನುವ ನಿಲುವು ಇಲ್ಲಿ ವ್ಯಕ್ತವಾಗಿದೆ.

ಗುರು-ಶಿಷ್ಯ ಸಂಬಂಧವನ್ನು ಹಲವು ಪೌರಾಣಿಕ ಪ್ರತಿಮೆಗಳ ಮೂಲಕ ಇಲ್ಲಿನ ವಚನಗಳು ವಿವರಿಸುತ್ತವೆ. ಗುರು ಎಂದರೇನು? ಎನ್ನುವುದಕ್ಕೆ ಶ್ರೀ ನಿರುಪಾಧೀಶ್ವರರ ನಿಲುವುಗಳಲ್ಲಿ ಹೊಸ ಚೈತನ್ಯ ವಿರುವುದನ್ನು ಕಾಣಬಹುದು. ದ್ರೋಣ ಮತ್ತು ಅರ್ಜುನನ ಸಂಬಂಧದ ಮೂಲಕ ಗುರುವಿನ ಸ್ವಾರ್ಥಕರ ದೃಷ್ಟಿಕೋನವನ್ನು ಶ್ರೀಗಳು ಖಂಡಿಸುತ್ತಾರೆ. ಗುರು ಶಿಷ್ಯರ ಸಂಬಂಧವು ಕಬ್ಬಿನ ಹಾಲು ಮತ್ತು ಅದರ ಜೊತೆ ಬೆರೆತ ನಿಂಬುರಸದಂತೆ ಮಧುರವಾಗಿರಬೇಕು. ಗುರು ದ್ರೋಹಿಯನ್ನು ಅವರು ಟೀಕಿಸುತ್ತಾರೆ. ಶಿಷ್ಯನು ಮಾಡಿದ ತಪ್ಪಿಗೆ ಗುರುವಿನ ಚರಣದಡಿ ಕ್ಷಮೆಯಾಚಿಸುವುದೊಂದೆ ಪ್ರಾಯಶ್ಚಿತ್ತ ಮಾರ್ಗವೆನ್ನುತ್ತಾರೆ. ದುರುಳತನವನ್ನು ಹೊಂದಿರುವ ಗುರುವಾಗಲಿಕ್ಕೆ ಸಾಧ್ಯವಿಲ್ಲ. ಶಸ್ತ್ರ ಚಿಕಿತ್ಸೆ ಮಾಡಿಕೊಂಡ ಹೆಣ್ಣುಮಗಳು ಗರ್ಭಧಾರಣೆ ಹೊಂದಲು ಸಾಧ್ಯವಿಲ್ಲ. ದ್ರೋಹಿಯಾದವನು ಗುರುಪೀಠಕ್ಕೆ ಒಪ್ಪಲು ಸಾಧ್ಯವಿಲ್ಲ. ಗುರುವನ್ನು ಪಾಪಹರನೆಂದು ಕರಯಲಾಗುತ್ತದೆ. ಆದರೇ ಅದೇ ಗುರು ಪಾಪ ಕರ್ಮಗಳಲ್ಲಿ ತೊಡಗಿಕೊಂಡರೆ ಅವನನ್ನು ಪಾಪ ಹರ ಎಂದು ಹೇಗೆ ಕರೆಯುವುದು ಎನ್ನುವ ತಾತ್ವಿಕ ದೃಷ್ಟಿ ಸ್ವಾಮೀಜಿಗಿದೆ. ರಾವಣನಂತಹಾ ಕಪಟ ಸನ್ಯಾಸತ್ವ ಕಾವಿ ತೊಟ್ಟವರಿಗೆ ಸಲ್ಲದು.

ಮಠದಿಂದ ಮಠವಲ್ಲ ಮಠಾಧಿಪತಿಯಿಂದದು।
ಮಠವೆನಿಸಿಕೊಳು ಸಮಾಜ ಸುಧಾರಣೆಗೆ ।
ಮೇಟಿಯಾಗಿಹನು ಅಡವೇಶ। ॥ ೬೯೦ ॥

ಇಂದಿನ ಮಠಗಳು ಸ್ವಾರ್ಥಕರ ಹಿತದೃಷ್ಟಿಗೆ ನೀರೆರೆಯುತ್ತಿರುವುದನ್ನು ಗಮನಿಸಿದರೆ ಈ ವಚನದ ಮೌಲ್ವಿಕತೆ ಅರ್ಥವಾಗುತ್ತದೆ. ಬೇಕಾದಾಗ ಯತಿತ್ವದ ವೇಷತೊಟ್ಟು, ಠಕ್ಕ ಮಾಡುವ ಠಕ್ಕನಂತೆ ವರ್ತಿಸುವ ಮಠಾಧೀಶರನ್ನು

ಕ್ರಿಮಿಗಳಿಗೆ ಹೋಲಿಸುತ್ತಾರೆ. ಸ್ವಾಮಿಗಳ ಪೀಠವನ್ನು ಏರುವುದೆಂದರೆ, ತಲೆಯ ಮೇಲೆ ಚೂರಿಯನ್ನು ಇಟ್ಟುಕೊಂಡಂತೆ.

ಪೀಠವೇರುವ ಪೂರ್ವ ಗೂಟ ಕೆಳಗಿದೆ ನೋಡು।
ಸಾಟಿ ಶಿರ ಮೇಲೆ ಚೂರಿಯಿದೆ–ತಪ್ಪಿದರೆ ।
ನೆಟ್ಟು ಒದ್ದಾಟ ಅಡವೇಶ। ॥ ೭೦೬ ॥

ಒಂದೊಮ್ಮೆ ಈ ಚೂರಿ ತಪ್ಪಿದರೆ ನೆತ್ತಿಯ ಮೇಲೆ ಬಿದ್ದು ಬದುಕಿನ ಅಂತ್ಯಕ್ಕೆ ಕಾರಣವಾಗಬಹುದು ಎನ್ನುವ ಎಚ್ಚರಿಕೆ ನೀಡುತ್ತಾರೆ. ಕಾವಿ ಉಟ್ಟು, ಕೇಶಗಳನ್ನು ಇಳಿಬಿಟ್ಟ ತಕ್ಷಣ ಯಾರು ಸ್ವಾಮೀಜಿಗಳಾಗುವುದಿಲ್ಲ. ಅವರಿಗಿಂತ ಗೊಡ್ಡೆಮ್ಮೆಗಳಿಂದ ಹಾಲುಕರೆಯಲು ಕುಳಿತ ದಡ್ಡರೇ ಲೇಸು. ಗಡ್ಡಮೀಸೆಗಳು ಓತಕ್ಕೂ ಬರುತ್ತವೆ. ಅದನ್ನು ಸನ್ಯಾಸ ಎಂದು ಕರೆಯಲು ಸಾಧ್ಯವೇ?

ಗಡ್ಡ ಕೇಶಗಳಿರಲು ದೊಡ್ಡ ಸ್ವಾಮಿಗಳೇನು।
ಗೊಡ್ಡೆಮ್ಮೆಯಿಂದ ಹಾಲು ಕರೆಯಲು ಕುಳಿತ ।
ದಡ್ಡರರು ಶ್ರೇಷ್ಠ ಅಡವೇಶ। ॥ ೬೯೬ ॥

ಒಂದು ಮಠಕ್ಕೆ ಒಬ್ಬನೇ ಮಠಾಧೀಶ, 'ಮನದ ಸನ್ಯಾಸವೇ ಮಾನ್ಯತೆಯ ಸನ್ಯಾಸ' ಎಂಬ ಮಾತಿನಲ್ಲಿ ಮನಸ್ಸಿನಿಂದ ಸನ್ಯಾಸತ್ವವನ್ನು ಸಾಧಿಸಬೇಕು. ಕಾವಿಯನ್ನುಡುವುದು ಜನರ ದೃಷ್ಟಿಯಲ್ಲಿ ಸನ್ಯಾಸಿಯನ್ನು ಗುರುತಿಸುವುದಕ್ಕೆ ಮಾತ್ರ. ಮನಸ್ಸಿಗೆ ಕಾವಿ ಬೇಕಾಗಿಲ್ಲ. ಮನಸ್ಸು ಸಹಜವಾಗಿ ಎಂತಹಾ ಆಡಂಬರಗಳನ್ನು ಬಯಸುತ್ತದೆ ಎಂದಾದರೆ ಅವನು ಸಂನ್ಯಾಸಿಯಾಗಲು ಅರ್ಹನಾಗುವುದಿಲ್ಲ. ಕಾಮ, ಕ್ರೋಧ, ಮೋಹ, ಮದ ಮಾತ್ಸರ್ಯವನ್ನು ಬಿಡದೆ ಕಾವಿ ಹಾಕಿಕೊಳ್ಳುವ ವೇಷ ಏಕಯ್ಯ? ಎಂದು ತಮ್ಮ ವಚನಗಳ ಮೂಲಕ ವಿಡಂಬಿಸುತ್ತಾರೆ. ಸಿಂಹಕ್ಕೆ ಎಷ್ಟೇ ಹಸಿವಾದರೂ ಅದು ಹುಲ್ಲಿನ ರಸವನ್ನು ಕುಡಿಯಲು ಸಾಧ್ಯವಿಲ್ಲ. ಅದೇ ರೀತಿ ಭಸ್ಮಧಾರಿಗಳಾದ ನಿಜವಾದ ಸಂನ್ಯಾಸಿಗಳು ಎಷ್ಟೇ ಕಷ್ಟದಲ್ಲಿದ್ದರೂ ತಮ್ಮ ಧರ್ಮವನ್ನು ಬಿಡಲು ಸಾಧ್ಯವಿಲ್ಲ. ಅದೇ ರೀತಿ ಗುರು–ಶಿಷ್ಯರ ಸಂಬಂಧವು ಒಂದಕ್ಕೊಂದು ಪೂರವಾಗಿದೆ ಎನ್ನುವಂತಹಾ (ಪದ್ಯ–೬೪೪) ಈ ವಚನವನ್ನು ಹೇಳುತ್ತಾರೆ. ಗುರು–ಶಿಷ್ಯರ ಬಂಧವ್ಯವು ದ್ವಿದಳ ಧ್ಯಾನ್ಯದಂತೆ. ಇವೆರಡ್ ಒಂದಕ್ಕೆ ಒಂದು ಪೂರಕ. ಗುರುವನ್ನು ಬಿಟ್ಟು ಭಕ್ತ ಅಥವಾ ಶಿಷ್ಯನಿರಲು ಸಾಧ್ಯವಿಲ್ಲ. ಹಾಗೆ ಶಿಷ್ಯನು ಗಿವಿನ ಘನತೆಯನ್ನು ತಿಳಿದ ಮೇಲೆ ದೂರ ಇರಲು ಸಾಧ್ಯವಿಲ್ಲ. ನಿರಂತರ ಬೆಳಕನ್ನು ಕೊಡುವ ಗುರುವಿನ ಸಂಘ ಶಿಷ್ಯನಿಗೂ ಬೇಕು. ದ್ವಿದಳ ಧ್ಯಾನ್ಯವನ್ನು ಬೇರೆ ಬೇರೆ ಮಾಡಿದರೆ ಅಥವಾ ಇಡೀ ಕಾಳನ್ನು ಬೇರೆ ಬೇರೆ ಮಾಡಿದರೆ ಅದರಿಂದ ಮೊಳಕೆಬರಲು ಹೇಗೆ ಸಾಧ್ಯವಿಲ್ಲವೋ ಹಾಗೆಯೇ ಆತ್ಮದ ಉನ್ನತಿಯು ಸಾಧ್ಯವಿಲ್ಲ.

ಆಧುನಿಕ ಶಿಕ್ಷಣ ನೀಯಿಯು ಅಧ್ಯಾಪಕ ಮತ್ತು ವಿದ್ಯಾರ್ಥಿಗಳ ಬಾಂಧವ್ಯವು ಇಲ್ಲಿ ವಚನಗಳ ವಿಷಯವಾಗುತ್ತದೆ.

ಅಧ್ಯಯನ ತನಗಿರದ ಅಧ್ಯಾಪನೆಂತುಂಟು ।
ಶುದ್ಧ ಸತ್ವದಲಿ ನೀ ನಡೆದು ನಡೆಸುತಿಹ।
ಅಧ್ಯಾಪಕನಿರಲಿ ಅಡವೇಶ। ॥ ೮೬೮ ॥

ವಿದ್ಯಾರ್ಥಿಗಳ ಮತ್ತು ಅಧ್ಯಾಪಕರುಗಳ ಸಂಬಂಧವು ಹೇಗಿರಬೇಕು ಎನ್ನುವುದಕ್ಕೆ ಇಲ್ಲಿ ಅನೇಕ ವಚನ ನಿರ್ದೇಶನವಿದೆ. ಪ್ರಾಧ್ಯಾಪಕರಾದವರಿಗೆ ಅಧ್ಯಾತ್ಮಿಕ ಅನುಭವವಿರಬೇಕು. ವಿದ್ಯಾರ್ಥಿಗಳಿಗೆ ಅದೇ ಶಕ್ತಿ. ಗುರು–ಧರ್ಮ ಅರಿತು

ಅಧ್ಯಾಪಕನಾದವನು ಶಿಷ್ಯನಿಗೆ ಕಲಿಸಬೇಕು. ತಾನು ಮೊದಲು ಅಧ್ಯಯನ ನಿರತನಾಗಿ, ತನ್ನ ಶಿಷ್ಯರಿಗೆ ಕಲಿಸಬೇಕೆನ್ನುವ ಅಭಿಪ್ರಾಯ ಸಂದರ್ಭೋಚಿತವಾಗಿದೆ. ಅಧ್ಯಾಪಕನು ಶುದ್ಧ ತತ್ವದಲ್ಲಿ ನಡೆದರೆ ಶಿಷ್ಯನಾದವನು ಅದೇ ದಾರಿಯಲ್ಲಿ ನಡೆಯುತ್ತಾನೆ. ಇಸ್ಪೀಟು, ಮದ್ಯಪಾನ ಸ್ತ್ರೀ ವ್ಯಾಮೋಹ ಇತ್ಯಾದಿಗಳಲ್ಲಿ ಶಿಷ್ಯರು ಸಿಲುಕಿಕೊಂಡರೇ ಅವರ ಬದುಕು ಹಾಳಾಗುವುದಂತು ನಿಶ್ಚಿತ. ನಿರಂತರ ಅಧ್ಯಯನ, ಪರೀಕ್ಷೆ ಇವು ವಿದ್ಯಾರ್ಥಿಯ ಸಂಗಾತಿಗಳಾಗಬೇಕು. ಇಂದಿನ ಮಕ್ಕಳಿಗೆ ಶಿಕ್ಷಣವೆನ್ನುವುದು ಶಿಕ್ಷೆಯಾಗುವ ಯಾವುದೇ ಸಂದರ್ಭಗಳನ್ನು ಪೋಷಕರು ಸಹಿಸುವುದಿಲ್ಲ. ಶಿಕ್ಷಕನಾದವನು ವಿದ್ಯಾರ್ಥಿಗಳಿಗೆ ಒಂದು ಪೆಟ್ಟು ಹೊಡೆದರೆ ಪೋಷಕರು ಸಿಟ್ಟಿಗೇಳುವುದನ್ನು ಕಾಣಬಹುದು. ಆದರೆ ಗುರು ಹೊಡೆಯುವಾಗ ಅಲ್ಲಿ ತಾಯಿಯ ಪ್ರೀತಿ ಇರುತ್ತದೆ ಎಂದು ಯಾರು ಅರ್ಥಮಾಡಿಕೊಳ್ಳುವುದಿಲ್ಲ.

ಇಲ್ಲಿನ ಬಹುತೇಕ ತ್ರಿಪದಿಗಳು ಜ್ಞಾನಬೇಧೆಯನ್ನು ಒಳಗೊಂಡಿದೆ. ತಮ್ಮ ಅರಿವಿಗೆ ಅರ್ಥಕ್ಕೆ ಒಗ್ಗುವ ಶಬ್ದಗಳನ್ನು ಶ್ರೀಗಳು ಬಳಸಿಕೊಳ್ಳುತ್ತಾ ಹೋಗುತ್ತಾರೆ. ಅರ್ಥದ ಹಂಗಿಲ್ಲದಲ್ಲಿಯೇ ಕೆಲವೊಮ್ಮೆ ಶ್ರೀಗಳು ಮಾಡುವ ಪದಬಳಕೆ ಒಂದಕ್ಕೊಂದು ಸಂಬಂಧವಿಲ್ಲದಂತೆ ತೋರುತ್ತದೆ. ಇಲ್ಲಿ ಭೋಧನೆಯೇ ಪ್ರಧಾನವಾಗಿರುವುದರಿಂದ, ಅರ್ಥಕ್ಕೆ ಕಟ್ಟುಬಿದ್ದು ಹುಡುಕಾಟ ನಡೆಸುವುದು ವ್ಯರ್ಥವೆನಿಸುತ್ತದೆ. ಪದ–ಪದಗಳು ಒಂದರೊಳಗೊಂದು ಬೆರೆತು ನೀಡುವ ಅರ್ಥಕ್ಕಿಂತ ಒಟ್ಟು ಭಾವವನ್ನು ಗ್ರಹಿಸಿ ನೋಡುವುದು ಇಲ್ಲಿ ಉಚಿತವೆನಿಸುತ್ತದೆ.

ವಿಷಯ ಬೋಧನೆ ಮೊದಲು ವಿಷಯ ತಾಂ ಅಳಿಯಬೇಕು।
ಒಸೆದ ವರಬೋಧೆ ಮಸಕಳಿದು ಮನುಜರೊಳು।
ಪೊಸತು ಫಲ ಸಿದ್ಧಿ ಅಡವೇಶ। ॥ ೮೧೭ ॥

ವಚನಕಾರರೇ ಹೇಳುವಂತೆ ಗಂಭೀರ ನಿಲುವು ಹಾಗು ಗಂಭೀರ ಹಿನ್ನೋಟ ಇಲ್ಲಿನ ತ್ರಿಪದಿಗಳ ವೈಶಿಷ್ಟ್ಯವಾಗಿದೆ.

ಇಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ರಾಜಕೀಯ ಪಕ್ಷ, ರಾಜಕಾರಣ ಬಹಳಷ್ಟು ಮಹತ್ವದ ಸಂಗತಿಗಳಾಗಿ ವಿವಿಧ ಟೀಕೆ ವಿಡಂಬನೆಯ ವಸ್ತುವಾಗುತ್ತಿರುವುದು ಸಾಮಾನ್ಯ ಸಂಗತಿ. ಧರ್ಮವಿಲ್ಲದ ರಾಜಕಾರಣ, ಸರ್ವಾಧಿಕಾರದ ಧೋರಣೆ ಹೆಚ್ಚು ಪ್ರಭಲವಾಗುತ್ತಿದೆ. ಮೋಸ ವಂಚನೆಗಳು, ಜಾತಿ ವಾದಗಳು, ಧರ್ಮ–ದರ್ಮದ ನಡುವಿನ ವೈಷಮ್ಯಗಳು ರಾಜಕಾರಣದ ಭಾಗವಾಗುತ್ತಿರುವಾಗ ಇದಕ್ಕೆಲ್ಲಾ ಪರಿಹಾರ ಎನ್ನುವಂತೆ ನಿರುಪಾಧೀಶ್ವರರ ವಚನಗಳಲ್ಲಿ ಹಲವು ಮಹತ್ವದ ಸಂಗತಿಗಳಾಗಿವೆ. ಧರ್ಮವನ್ನು ಮರೆತು ನಾಡನ್ನು ಆಳುವುದು ಎಂದರೆ ಬೀದಿ ಸ್ತ್ರೀಯರ ಸಂಗವನ್ನು ಬಯಸಿದಂತೆ, ಆಡಳಿತ ನಡೆಸುವುದೆಂದರೆ ಆಡು ಕಾಯ್ದದಂತಲ್ಲ ಇದು ಶ್ರೀಗಳ ಪ್ರಸಿದ್ಧ ಸಾಲು

ಆಡಳಿತ ನಡೆಸುವುದು ಆಡು ಕಾಯ್ದಂತಲ್ಲ।
ಕೂಡಿದಾಡಳಿತ ಒಡಕೊಮ್ಮೆ–ಏಕ ಪ ।
ಕ್ಷಾಡಳಿತವಿರಲಿ ಅಡವೇಶ। ॥ ೯೦೮ ॥

ವಿವಿಧ ಪಕ್ಷಗಳು ಸೇರಿ ಸಮ್ಮಿಶ್ರ ಅಧಿಕಾರ ನಡೆಸುವುದಕ್ಕಿಂತ, ಒಂದೇ ಆಡಳಿತ ಪಕ್ಷವಿದ್ದರೆ ಒಳಿತೆನ್ನುವುದನ್ನು ಇಲ್ಲಿ ಗಮನಿಸಬಹುದು. ಇನ್ನೊಬ್ಬರ ಬಿಡೆ ಬಂಧನಕ್ಕಿಂತ, ಸುಡುಗಾಡಿನಲ್ಲಿರುವುದು ಒಳ್ಳೆಯದು. ಮಾತಿನೊಲ್ಲೊಂದು–ಕೃತಿಯಲ್ಲೊಂದು, ಮೇಲೆ ನಗೆ–ಒಳಗೆ ಹೊಗೆ ಈ ಬಗೆಯ ರಾಜಕಾರಣಿಗಳಿಂದ ಸಮಾಜದ ಉನ್ನತಿ ಸಾದ್ಯವಿಲ್ಲ. ಆನರ ಅಭಿಪ್ರಾಯದಂತೆ ಆಡಳಿತ ನಡೆಸುವುದೇ ಧರ್ಮ. ಇಡೀ ಕಲ್ಯಾಣ ಪಟ್ಟಣದ ನಾಶಕ್ಕೆ ಬಿಜ್ಜಳನ ಜನಾಭಿಪ್ರಾಯ ಬೆಂಬಲಿಸದೇ ಸ್ವ ಬುದ್ಧಿಯನ್ನು ಓಡಿಸುವುದರ ಪರಿಣಾಮವಾಗಿ ನಾಶ ಹೊಂದುವಂತಾಯಿತು.

ಹಾಗಾಗಿ ಸರ್ವಾಧಿಕಾರಿ ಧೋರಣೆಯನ್ನು ಬಿಟ್ಟು ಪ್ರಜಾಪ್ರಭುತ್ವದ ಆಶಯಗಳು ಮುನ್ನೆಲೆಗೆ ಬರುವುದು ನಿರುಪಾಧೀಶ್ವರರ ಅಭಿಪ್ರಾಯವಾಗಿದೆ. ಪಕ್ಷಾಂತರವು ರಾಜಕಾರಣಕ್ಕೆ ಅಪಾಯವೆನ್ನುತ್ತಾರೆ. ಹಣದಾಸೆಗೆ ಇನ್ನೊಂದು ಪಕ್ಷಕ್ಕೆ ಹೋಗುವ ರಾಜಕಾರಣಿಗಳಿಗೆ ಮೊಂದೊಂದು ದಿನ ನಂಜಾಗಬಹುದು ಎನ್ನುವ ಎಚ್ಚರಿಕೆ ನೀಡುತ್ತಾರೆ. ಗಂಜಿಯನ್ನು ಬಿಡಬೇಡ ನಂಜಿ ಹೋಗಬೇಡ ಎನ್ನುವ ವಿವೇಕ ಇಂದಿನ ರಾಜಕಾರಣಕ್ಕೆ ಒಪ್ಪುವಂತಿದೆ.

ಚೌಪದಿ ಚಂಪಕ

ಅಡವಿಸಿದ್ದ, ನಿರುಪಾಧೀಶ ಎಂಬ ಅಂಕಿತದ ಮೂಲಕ ಚೌಪದಿಗಳು ರಚಿಸಿದ ಶ್ರೀ ನಿರುಪಾಧೀಶ್ವರರು ಚೌಪದಿಯ ಲಯವನ್ನು ಕರಗತ ಮಾಡಿಕೊಂಡವರು. ತ್ರಿಪದಿಗಳಿಗೆ ಹೋಲಿಸಿದರೆ ಚೌಪದಿಗಳಲ್ಲಿ ಪದ, ಅರ್ಥ, ಭಾವ ಸಂಚಾರಕ್ಕೆ ಬೇಕಾದಷ್ಟು ಅವಕಾಶವಿರುವುದನ್ನು ನೋಡಬಹುದು. ಈ ವಚನ ಮತ್ತು ಚೌಪದಿಗಳಲ್ಲಿ ಸಾಮಾನ್ಯ ಜನಸಮೂದಾಯಕ್ಕೆ ಬೇಕಾಗಿರುವ ವಿವೇಕವನ್ನು ಸಹಜವಾಗಿ ಹೇಳುವ ಆಧುನಿಕ ಪರಿಭಾಷೆಯನ್ನು ಬಳಸಿ ನುಡುಯುವ ಹೇಳುವ ಕ್ರಮವನ್ನು ನೋಡಬಹುದು. ಇಸ್ಪೀಟು, ತಂಬಾಕು, ಲಾಟರಿ, ವ್ಯಾಪಾರ–ವ್ಯವಹಾರ, ನೋಟು(ಹಣ) ಇತ್ಯಾದಿ ಹಲವು ಅನ್ಯ ಭಾಷೆಯ ಪದಗಳನ್ನು ಸಹಜವಾಗಿ ತಮ್ಮ ವಚನಗಳಲ್ಲಿ ಬಳಸುತ್ತಾರೆ. ದೈನಂದಿನ ಸುದ್ದಿ, ಸಮಾಚಾರಗಳನ್ನು ಚೌಪದಿಗಳಾಗಿಸುವ ವಿಶೇಶತೆ ಈ ಸಂಕಲನದ ಇನ್ನೊಂದು ಗುಣ. ನಿಧಿಯ ಆಸೆಗಾಗಿ ಮಕ್ಕಳನ್ನೇ ಕೇಂದ್ರ ಘಟನೆಯನ್ನು ಪತ್ರಿಕಾ ವರದಿಯನ್ನು ಬಳಸಿ, ನಿಧಿಗೆ ಬಲಿ ಸಂತಾನ, ಅಧಿಕಾರ ಲಾಲಸೆಗೆ ರಾಜವಂಶ ಇಂತಹ ಸಾಲುಗಳ ಮೂಲಕ ಲೋಕ ಸಮಾಚಾರವನ್ನು ಈ ಅಭಿವ್ಯಕ್ತಿಗೆ ಬಳಸಿಕೊಂಡಿರುವುದು ವಿಸ್ಮಯವೆನಿಸುತ್ತದೆ.

ಮೊಲವ ಕೊಲ್ಲುವ ಮನುಜ ಹುಲಿಯಕಡೆನೋಡ, ಮನೆ
ಇಲಿಯ ಹಿಡಿಯದಕಾಗಿ ಬಲೆಯನಿಡುವ
ಕುಲಗೇಡಿಗಳ ಹೇಡಿತನದಾಟ ತಗಣಿಗಳ
ಕೊಲುವ ಬಿಸಿಲೊಳಗೆಸೆದು–ಅಡವಿಸಿದ್ದ ॥ ೬೯೩ ॥

ಕೊಲ್ಲುವ ಮನುಷ್ಯನ ಗುಣವನ್ನು ನೋಡಿ ಮೊಲವನ್ನು ಕೊಲ್ಲುವ ಮನುಷ್ಯ ಹುಲುಯನ್ನೇಕೆ ಕೊಲ್ಲುವುದಿಲ್ಲ. ಹೊರಗಿನ ಪ್ರಾಣಿ–ಪಕ್ಷಿಗಳನ್ನು ಕೊಲ್ಲುವುದಕ್ಕಿಂತ, ತನ್ನೊಳಗಿನ ಹೇಸಿತನದ ವಂಚನೆಗಳನ್ನು ಕೊಲ್ಲುವುದು ಅಗತ್ಯವೆನ್ನುತ್ತಾರೆ. ಗಾಂಧಿ, ಸಾಕ್ರೆಟೀಸ್, ಲಿಂಕನ್ ಅಂತರವನ್ನು ಕೊಲ್ಲುವ ಪರಿಪಾಠ ಮುಂದೆಯೂ ನೆಡೆಯುವುದೇ? ಎನ್ನುವ ಆತಂಕದ ನಡುವೆ, ಮನುಷ್ಯ ತನ್ನೊಳಗಿರುವ ಕಾಮ–ಕ್ರೋಧಗಳನ್ನು ಕೊಲ್ಲಬೇಕೆನ್ನುವ ಅಭಿಪ್ರಾಯವಿದೆ. ದಲಿತತ್ವವನ್ನು ಕುರಿತು ಸ್ವಾಮೀಜಿ ಮಾತನಾಡುತ್ತಾರೆ. ಹಿಂದೂ, ಕ್ರೈಸ್ತ, ಮುಸ್ಲಿಂ, ಪಾರ್ಸಿ, ಚಾರ್ವಕ, ಜೈನ, ಭೌದ್ಧ ಎಲ್ಲಾ ಧರ್ಮದಲ್ಲಿಯೂ ಕುಂದು ಕೊರತೆಗಳಿವೆ.

ದಲಿತರೆನ್ನದು, ಅವರ ದೀಕ್ಷೆಯಾದುದ ದಿವವೆ
ಸಲೆವೀರಶೈವವೆಂಬ ಅಗಮೋಕ್ತಿ
ಚೆಲುವ ನುಡುಗಳ ನೆನಹಿನೊಳಗಿಹುದೆ ಶುಭ ಪಕ್ವ
ಫಲಕಾವ ತೆರದ ಅಡಿ –ಅಡವಿಸಿದ್ದ ॥ ೭೧೩ ॥

ಸಾಮಾಜಿಕವಾಗಿ ಅಸ್ಪೃಷ್ಯನೆನಿಸಿಕೊಂಡ ದಲಿತರನ್ನು ಶರಣಧರ್ಮ ಸಮಾನ ಮಾನವೀಯತೆಯನ್ನು ನೀಡಿ ಗೌರವಿಸಿದ ಹನ್ನೆರಡನೇ ಶತಮಾನದ ಧೋರಣೆಯನ್ನು ಈ ವಚನವು ನೆನಪಿಸಿಕೊಳ್ಳುತ್ತದೆ. ವೀರಶೈವ ಲಿಂಗದೀಕ್ಷೆಯ ಮೂಲಕ

ಬಸವಣ್ಣನವರು ದಲಿತರನ್ನು ಉದ್ಧರಿಸುವ ಕಾರ್ಯ ಮಾಡಿರುವ ಸಂಗತಿಯನ್ನು ಇಲ್ಲಿ ಸ್ಮರಿಸಿಕೊಳ್ಳುತ್ತಾರೆ. ಸೌಂದರ್ಯ ಸ್ಪರ್ಧೆಯು ಚೌಪದಿಯ ವಿಷಯಗಳಾಗುತ್ತವೆ. ಮೀಸಲಾತಿಯು ಇಲ್ಲೊಂದು ವಿಷಯವಾಗುತ್ತದೆ. ಈ ಕಾಲದ ಸಂವೇದನೆಗಳೆಲ್ಲವನ್ನು ತಮ್ಮ ವೈಚಾರಿಕತೆಯ ಓರೆಗೆ ಹಚ್ಚಿ ನೋಡುವ ಸಹಜ ಆಸಕ್ತಿಯನ್ನು ವಚನಕಾರರು ಬೆಳೆಸಿಕೊಂಡಿದ್ದಾರೆ. ಬೆಂಗಳೂರಿನಲ್ಲಿ ನಡೆದ ಭುವನ ಸುಂದರಿ ಸ್ಪರ್ಧೆಯನ್ನು ನೆನಪಿಸಿತ್ತಾ, ಹೆಣ್ಣಿನ ಸೌಂದರ್ಯ ಮಾಪನೆಗೆ ತೊಡಗುವ ಆಧುನಿಕರು ತಮ್ಮೊಳಗಿರುವ ಹೃದಯ ಸೌಂದರ್ಯವನ್ನು ಏಕೆ ನೋಡುವುದಿಲ್ಲ ಎಂಬ ಪ್ರಶ್ನೆಯನ್ನು ಹಾಕಿಕೊಳ್ಳುತ್ತಾರೆ. ಈ ವಚನಗಳ ಒಳಗಿನ ಸಾರವು ಮೊದಲು ಸಾಧಕನಾಗು, ಬಳಿಕೆ ಶೋಧಕನಾಗು ಎನ್ನುವುದನ್ನೇ ಮತ್ತೆ ಮತ್ತೆ ಹೇಳುತ್ತದೆ.

ಮನೆಯ ಕಸ ತೆಗೆದಾಗ ಮನಕೆ ಮಹದಾನಂದ
ಮನಧೂಳಿ ಕಳೆಯದೆ ಮಹತೆಯಂತೋ
ತನು ಹೊಸಲ ಕಳೆಯದಿರೆ ಸೊಗಸೆಂತೂ? ಸಂಸಾರ
ಕೊನೆಯನದ ಕೊಳಕಣ್ಣಿ–ಅಡವಿಸಿದ್ದ ॥ ೮೫೮ ॥

ಮನೆಯ ಕಸವನ್ನು ತೆಗೆದಾಗ, ಹೀಗೆ ಮನಸ್ಸಿಗೆ ಆನಂದ ಉಂಟಾಗುತ್ತದೆಯೋ ಹಾಗೆಯೇ ಮನದ ಧೂಳನ್ನು ನಾವು ಸ್ವಚ್ಛಗೊಳಿಸುತ್ತಿರಬೇಕು. ಮನಶುದ್ಧಿ ಮತ್ತು ತನು ಶುದ್ಧಿಯ ಜೊತೆಗೆ ಆಧ್ಯಾತ್ಮಕ ಪ್ರೀತಿ ಇರಬೇಕೆನ್ನುವ ಅಭಿಪ್ರಾಯ ಇಲ್ಲಿ ಕಾಣಬಹುದು. ಬದುಕುವುದು ಮತ್ತು ಕಲಿಯುವುದು ಇವೆರೆಡೂ ಅಧ್ಯಾತ್ಮಿಕತೆಯ ಒಂದು ಭಾಗ. ಬದುಕಬೇಕು ಎನ್ನುವ ಆಸೆ ಇರುವ ವ್ಯಕ್ತಿ ಹದವರಿತು ಮಧುರವಾಗಿ ಬದುಕಬೇಕು. ಒಮ್ಮೊಮ್ಮೆ ಮೌನಿಯಾಗುತ್ತಾ ತನ್ನನ್ನು ತಾನು ತಿಳಿಯುವ ಜೊತೆಗೆ, ನೆರೆ–ಹೊರೆಯವರನ್ನು ತಿಳಿದಿರಬೇಕು. ಅದೇ ಪಕ್ವತೆಯ ಲಕ್ಷಣ. ಚೆನ್ನಾಗಿ ಬಾಳುವುದಕ್ಕೆ ಬೇಸರಗೊಳ್ಳಬಾರದು.

ತನ್ನ ಪ್ರೀತಿಸದಂತೆ ಅನ್ಯರಂ ಸಹಿತಾಗಿ
ಚನ್ನದಿಂ ಪ್ರೀತಿಸುವ ಸರಳ ಭಾವ
ನಿನ್ನೊಳುದಿಸಿರಲದೆ–ಶಿವಚಿಂತನಕೆ ಫಲವಿ–
ದೆನ್ನು ನಿಸ್ಸಂಶಯದಿ–ಅಡವಿಸಿದ್ದ ॥ ೯೦೯ ॥

ಎಲ್ಲರನ್ನು ಪ್ರೀತಿಸುವ ಸರಳ ಭಾವ ನಮ್ಮಲ್ಲಿ ಹುಟ್ಟಿದೊಡನೆ, ಶಿವಚಿಂತನಕ್ಕೆ ಅದು ದಾರಿ ಮಾಡಿಕೊಡುತ್ತದೆ. ಜೀವನವೇ ಒಂದು ತಪ. ಸೇವೆಯಿಂದಲೇ ಜಪ–ಸುಬಾಹು ಆಚರಣವೇ ಸದ್ಭಾವ ಆಚರಣೆಯ ಸಮಾಧಿ. ಆಗಲೇ ದೇವರು ನಮ್ಮ ಜೊತೆಗೂಡುವ. ಅಂತವರಿಗೆ ಸಾವಿಲ್ಲ

ಬದುಕಿ ಬದುಕಿಸಬೇಕು, ನಡೆದು ನಡೆಯಿಸಬೇಕು,
ಹದಗೂಡಿ ಹದಗೊಳಿಸಿ ಹಾಡಬೇಕು
ಮುದವಾಗಿ ಬದಿಯವರ ಬರಮಾಡಿಕೊಳ್ಳುತಲಿ
ಮಧುರುಣಿಸುತ್ತಿರೆ ಸಾಕು –ಅಡವಿಸಿದ್ದ ॥ ೯೩೭ ॥

ಕನ್ನಡಕ ಹಾಕಿಕೊಂಡ ತಕ್ಷಣ ಕುರುಡುತನ ಹೋಗುತ್ತದೆಯೇ? ಕಿವಿಯ ಆಭರಣ ಧರಿಸಿದರೆ ಕಿವುಡುತನ ಹೋಗುತ್ತದೆಯೇ? ಹೊರಗಿನ ಬಿನ್ನಾಣಗಳನ್ನು ಬಿಟ್ಟು, ತನ್ನ ತನವನ್ನು ಅರಿತವರಿಗೆ ಈ ಬದುಕು ಸಹ್ಯವೆನಿಸುತ್ತದೆ. ಬದುಕಿನಲ್ಲಿ ಸಿಹಿ ಮತ್ತು ಕಹಿಗಳನ್ನು ಒಟ್ಟಾಗಿ ಸ್ವೀಕರಿಸುತ್ತಾ, ಕಷ್ಟಗಳನ್ನು ಸಹಿಸಬೇಕು. ಕಹಿ ಬರಲು ಒಡನೆ ಕುಡಿ, ಶರಣರಡಿ ಇಂತಹಾ ಮಾತುಗಳಲ್ಲಿ ಗಹನವಾದ ಅರ್ಥವನ್ನು ವಚನಕಾರರು ತುಂಬುತ್ತಾರೆ. ಮನುಷ್ಯ ಸಾಧನೆಯ

ಹಾದಿಯಲ್ಲಿ ತೊಡಗುವಾಗ ಸಾಕಷ್ಟು ಸಮಸ್ಯೆಗಳು, ವೇದನೆಗಳು ಎದುರಾಗುತ್ತವೆ. ವೇದನೆಯ ಹಾದಿಯನ್ನೇ ಪ್ರಸಾದವಾಗಿಸುವ ಕೌಶಲ್ಯ ಇರುವವರು ಬದುಕಿನಲ್ಲಿ ಎಂತಹಾ ಕಷ್ಟಗಳನ್ನು ಸಹಿಸುವನು. ಕಳೆದುಹೋದ ಸಂಗತಿಗಳ ಬಗ್ಗೆ ಚಿಂತಿಸದೇ ಮುಂದಿನ ದಾರಿಯನ್ನು ಕುರಿತು ಯೋಚಿಸಿದರೆ ಬದುಕು ಸುಲಭ. ಹೊರಗೆಳೆಯರಿಗಿಂತ ಒಳಗೆಳೆಯ ಶ್ರೇಷ್ಠ ಎನ್ನುವ ಅವರ ಮಾತಿನಲ್ಲಿ ಹೃದಯವೇ ನಮ್ಮ ಆಪ್ತ ಗೆಳೆಯ ಅವನ ಸಖ್ಯವೇ ಶ್ರೇಯಸ್ಕರ. ಸದಾ ನಮ್ಮ ಜೊತೆಯಲ್ಲಿರುವ ಅಂತರಂಗದ ಮಾತನ್ನು ಸಲಹೆಯನ್ನು ತಿರಸ್ಕರಿಸದೇ ಮುನ್ನಡೆಯಬೇಕು ಎನ್ನುಅ ಕರೆ ನೀಡುತ್ತಾರೆ.

ಇದ್ದಾಗ ಸೇವೆಯನ್ನು ಎಳ್ಳಷ್ಟು ಮಾಡದೆಯೆ
ಬಿದ್ದು ಹೋದಾತನ ಸಮಾದಿಯೊಳಗೆ
ಸದ್ದಿರದೆ ಹಿಡಿಮಣ್ಣು ಹಾಕುವಿಕೆಯ ಕಂಡು
ಎದ್ದೆದ್ದು ನಗುತ್ತಿದ್ದ-ಅಡವಿಸಿದ್ದ ॥ ೧೦೯೫ ॥

ತಂದೆ-ತಾಯಿ, ಹಿರಿಯರ ಸೇವೆಯನ್ನು ಮಾಡದೆ, ಅವರು ಬದುಕಿದಾಗ ಪ್ರೀತಿಯನ್ನು ತೋರಿಸದೇ ಅವರು ಸತ್ತಾಗ ಮಾಡುವ ಕ್ರಿಯೆಯನ್ನು ನೋಡಿ ಈ ವಚನದ ಮೂಲಕ ವಿಡಂಬಿಸಿತ್ತಾರೆ. ತಂದೆ-ತಾಯಿಯನ್ನು ಗೌರವಿಸುವ ಶ್ರೀರಾಮ-ಹನುಮಂತನ ಉಪಮೆಗಳನ್ನು ನೀಡುವುದರ ಮೂಲಕ, ಅಂದಿನ ಘಟನೆಗಳು ಇಂದಿಗೂ ನಮಗೆ ಪ್ರೇರಣದಾಯಕವೆನ್ನುವ ನಿಲುವು ಇಲ್ಲಿ ಕಾಣಬಹುದು. ಹೀಗೆ ವೈಯಕ್ತಿಕ ಬದುಕಿನ ಸಾಮಾಜಿಕ ಬದುಕನ್ನು ಆವರಿಸಿ ಬರೆಯುವ ಚಿಂತನಾ ಲಹರಿ, ಶೋಧನೆಯ ಹೊಸದೃಷ್ಟಿ ಇಲ್ಲಿನ ವಚನಗಳ ವೈಶಿಷ್ಟ್ಯವಾಗಿದೆ.

**ಆಧಾರ ಗ್ರಂಥಗಳು:**

೧. ವಚನಧರ್ಮ ಅರಿವಿನ ಬೆರಗು: ಎಸ್.ಜಿ.ಸಿದ್ಧರಾಮಯ್ಯ, ಸ್ವಪ್ನ ಬುಕ್ ಹೌಸ್ ಬೆಂಗಳೂರು(೨೦೧೯)
೨. ವಚನ ಸಾಹಿತ್ಯ ಸಂಗ್ರಹ: (ಸಂ.) ಸಂ.ಶಿ.ಭೂಸನೂರಮಠ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು (೨೦೦೬)
೩. ವೀರಶೈವ ಸಿದ್ಧಾಂತ, ಜೈನ ದರ್ಶನ ತೌಲನಿಕ ಅಧ್ಯಯನ : ವಿದ್ವಾನ್ ಡಾ.ಸಿ. ರೇಣುಕಾರಾಧ್ಯ, ಗುರು ಬಸವ ಅಧ್ಯಯನಪೀಠ, ಎಸ್.ಜೆ.ಎಂ ಸರ್ಕಲ್, ಶ್ರೀ ಬೆಕ್ಕಿನಕಲ್ಮಠ ಶಿವಮೊಗ್ಗ (೨೦೨೨)
೪. ಲಿಂಗಾಯತ ಕನ್ನಡದ ವಚನಧರ್ಮ: ಎಸ್.ಜಿ.ಸಿದ್ಧರಾಮಯ್ಯ, ಸ್ವಪ್ನ ಬುಕ್ ಹೌಸ್ ಬೆಂಗಳೂರು(೨೦೧೯)